VIJAYAKUMAR KANNUR
Digitally signed by VIJAYAKUMAR KANNUR
Date: 2025.09.06 17:41:23 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :**

ದಾವಾ ಆಸ್ತಿಗಳ ಸರ್ವೇ ನಂಬರ್ ನನಗೆ ಹೇಳಲು ಆಗುವುದಿಲ್ಲ , ಆದರೆ ಅವುಗಳ ವಿಸ್ತೀರ್ಣ 1 ಎಕರೆ ಮತ್ತು 30 ಗುಂಟೆ ಇರುವುದು. ನಾನು ಜನ್ಮ ತಾಳಿರುವ ಊರು ಕೆ. ಡಿ ಬುದ್ನಿ ಗ್ರಾಮವಾಗಿರುವುದು. ನನ್ನ ತಾಯಿಯ ತವರು ಮನೆ ಹಲಗಲಿ ಗ್ರಾಮ. ನನ್ನ ತಾಯಿಯನ್ನು ಬಿಸ್ನಾಳ ಗ್ರಾಮದ ಶಂಕರೆಪ್ಪ ಬಿಸ್ನಾಳ ಎಂಬುವವನ ಜೊತೆ ವಿವಾಹ ಮಾಡಿಕೊಟ್ರಿಮರು. ನನ ಜನಕ ತಂದೆ ಶಂಕರೆಪ್ಪ.

2. ನನ್ನ ತಂದೆ, ಇತನ ತಂದೆ ಹಾಗೂ ಇವರ ಪೂರ್ವಜರು ಬುದ್ನಿ ಗ್ರಾಮಕ್ಕೆ ಬಂದಿರುವುದಿಲ್ಲ ಮತ್ತು ಅವರು ಬುದ್ನಿಕ್ಕೆ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ನನ್ನ ತಂದೆ ಬುದ್ನಿ ಗ್ರಾಮಕ್ಕೆ ಬಂದಿರುವನು, ಆದರೆ ಆತನ ಪೂರ್ವಜರು ಬಂದಿರುವುದಿಲ್ಲ. ನನ್ನ ತಂದೆ ಶೆಂಕರೆಪ್ಪ ವಾಲ್ಮಿಕಿ ಸಮೂದಾಯಕ್ಕೆ ಸಂಬಂಧಪಟ್ಟಿರುವುದು ಎಂದರೆ ಸರಿ. ನನ್ನ ಅಧಾರ ಗುರುತಿನ ಚೀಟಿಯನ್ನು ಮೊದಲಿನಿಂದಲೂ ಬುದ್ನಿ ಕೆ. ಡಿ ಗ್ರಾಮದ ವಿಳಾಸದಲ್ಲೇ ಇರುವುದು. ನನ್ನ ಆಧಾರ ಗುರುತಿನ ಚೀಟಿ ಮಾಡಿಕೊಂಡಾಗ ನನ್ನ ವಿವಾಹ ಆಗಿತ್ತು. ನನ್ನ ವಿವಾಹ ಸುಭಾಷ ಮುಷ್ಠಿಗೇರಿ ಎಂಬುವವರ ಜೊತೆ ಆಗಿರುವುದು. ನನ್ನ ಗಂಡನ ಊರು ಲೋಕಾಪೂರ. ನನ್ನ ಆಧಾರ ಗುರುತಿನ ಚೀಟಿಯಲ್ಲಿ ಮೊದಲಿಗೆ ನನ್ನ ತಂದೆಯ ಹೆಸರು ದಾಖಲು ಇತ್ತು, ಈಗ ನನ್ನ ಗಂಡನ ಹೆಸರು ದಾಖಲು ಆಗಿರುವುದು.

3. ನನ್ನ ತಂದೆ ಶೆಂಕರೆಪ್ಪನ ಹೆಸರಿನಲ್ಲಿಬಿಸ್ನಾಳ ಗ್ರಾಮದಲ್ಲಿ ಜಮೀನುಗಳು ಇರುವವು. ಬುದ್ನಿ ಕೆ. ಡಿ ಗ್ರಾಮಕ್ಕೂ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ, ಆದರೂ ಸಹ ನಾನು ಪ್ರತಿವಾದಿಯರ ಕಡೆಯಿಂದ ಹಣ ಪಡೆದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನನ್ನ ತಂದೆಯ ಊರು ಬಿಸ್ನಾಳ ಗ್ರಾಮ ಮತ್ತು ನನ್ನ ಗಂಡನ ಊರು ಲೋಕಾಪೂರ ಗ್ರಾಮ ಇದ್ದರೂ ಸಹಿತ ನಾನು ಬುದ್ನಿ ಕೆ. ಡಿ ಗ್ರಾಮದವಳು ಅಂತ ಸುಳುನಿಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ 43 ವರ್ಷಗಳು ಆಗಿರುವವು.

4. ಕಮಲವ್ವ ಹಾಗೂ ಇತರ 3 ಜನರು ಕೂಡಿಕೊಂಡು ದೊಡ್ಡವ್ವಳ ವಿರುದ್ದ ಈ ದಾವೆ ದಾಖಲು ಮಾಡಿರುವರು. ವಾದಿಯರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿ 4 ರವರ ವಿವಾಹ ಆಗಿರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವಾದಿ 4 ಮತ್ತು ಮೃತ ಪ್ರತಿವಾದಿ 1 ರವರು ವಿವಾಹವಾಗಿದ್ದು, ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು ಮೃತ ಹೋಳೆಪ್ಪ ಜನ್ಮ ತಾಳಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ವಿಗೆ 2 ಇಬ್ಬರು ಸಹೋದರರು ಇರುವರು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ದಾಖಲೆಗಳು ಆಗಿರುವವು ಎಂದು ನನಗೆ ಮಾಹಿತಿ ಇರುವುದಿಲ್ಲ. ಈ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲೆಗಳ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ವಾದಿ 4 ಮತ್ತು ಪ್ರತಿವಾದಿ 1 ರವರು ಸುಮಾರು 40 ವರ್ಷಗಳ ಹಿಂದೆ ನಾನು ಜನ್ಮ ತಾಳುವ ಪೂರ್ವದಲ್ಲಿ ಇವರ ವಿವಾಹ ಆಗಿರುವುದು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು.

5. ಗಿರಿಯಪ್ಪ ಮೃತ ಪಟ್ಟ ನಂತರ ವಾದಿಯರು ದಾವಾ ಜಮೀನುಗಳು ಕಬ್ಜೆ ಹೊಂದಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿ 4 ರವರು ಮೃತ ಪ್ರತಿವಾದಿ 1 ರವರ ಹೆಂಡತಿಯಾಗಿದ್ದು, ಆದರೂ ಸಹಿತ ಪ್ರತಿವಾದಿ 2 ವಿನ ಮಾತುಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ 2 ರವರು ಹಾಗೂ ಮೃತ ಹೋಳೆಪ್ಪ ಇವರು ಬೀದರಿ ತೋಟದ ಶಾಲೆಯಲ್ಲಿ ಮತ್ತು ಬುದ್ನಿ ಕೆ ಡಿ ಶಾಲೆ ಕಲಿತಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿ 4 ರವರು ಪ್ರತಿವಾದಿ 1 ವಿನ ಜೊತೆ ಆತ ಜೀವಿತಾ ಕಾಲದಿಂದ ಅತ ಮೃತ ಪಡುವ ವೆರೆಗೆ ಆತನ ಜೊತೆಯಲ್ಲಿಯೇ ವೈವಾಹಿಕ ಜೀವನ ನಡೆಸಿರುವಳು ಎಂದರೆ ಸರಿಯಲ್ಲ.

6. ಪ್ರತಿವಾದಿ 1 ಐನ ಮನೆತನದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು ಆತನ ಸಹೋದರರು ಕೂಡಿಕೊಂಡು ಮನೆಯ ಆಸ್ತಿಯಲ್ಲಿ ಪಾಲು ವಾಟ್ನಿ ಮಾಡಿಕೊಂಡಿರುವರು. ಅದೇ ರೀತಿ ಇವರು ಜಮೀನುಗಳಲ್ಲಿಯೂ ಸಹ ಪಾಲು ವಾಟ್ನಿ ಮಾಡಿಕೊಂಡಿರುವರು. ಇವರು ಮನೆಯ ಅಸ್ತಿಯಲ್ಲಿ ವಾಟ್ನಿ ಮಾಡಿಕೊಂಡಿರುವುದಿಲ್ಲ, ಆದರೂ ಸಹ ವಾಟ್ನಿ ಮಾಡಿಕೊಂಡಿರುವುದಾಗಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಅದರಲ್ಲಿನ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ಪ್ರತಿವಾದಿ 2 ರವರು ಪ್ರತಿವಾದಿ 1 ರವರ ಹೆಂಡತಿಯಾಗಿದ್ದು , ಇವರ ವೈವಾಹಿಕ ಜೀವನದಿಂದ ಪ್ರತಿವಾದಿ 3 ರವರು ಜನ್ಮ ತಾಳಿರುವರು ಎಂದು ನಾನು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ ಹೇಳಿರುವ ಬಗ್ಗೆ ನನ್ನ ತಂದೆ ನನಗೆ ಮಾಹಿತಿ ನೀಡಿರುವರು.

7. ನನ್ನ ತಂದೆ ಮೃತ ಪಟ್ಟು ಈಗ 15 ವರ್ಷಗಳು ಆಗಿರುವವು. ಈ 15 ವರ್ಷಗಳ ಹಿಂದೆ ನಾನು ಬುದ್ನಿ ಕೆ ಡಿ ಗ್ರಾಮದಲ್ಲೇ ವಾಸವಾಗಿದ್ದೇನು. ದಾವಾ ಆಸ್ತಿಗಳು ಪ್ರತಿವಾದಿ 2 ಮತ್ತು 3 ರವರಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ಪ್ರತಿವಾದಿಯರ ಮಾತುಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.09.06 17:41:31 +0530

ಸಾಕ್ಷಿಯ ಸಹಿ                    ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ